**ದಿನಾಂಕಃ 21/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಐ ಆರ್ ಎಸ್ ವಕೀಲರಿಂದಃ**

1. 1 ನೇ ವಾದಿ ನನಗೆ ಚಿಕ್ಕಪ್ಪನಾಗಬೇಕು. 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಚಿಕ್ಕಮ್ಮ. ನನ್ನ ತಂದೆ, 1 ನೇ ವಾದಿ ಮತ್ತು ಮೃತ ಶಿವಲಿಗಯ್ಯ ರವರು 1990 ರ ಸಾಲಿನ ಹಿಂದೆಯೇ ಸ್ವತ್ತುಗಳನ್ನು ಭಾಗ ಮಾಡಿಕೊಂಡು ಬೇರೆ ಬೇರೆ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಸಿದ್ದಲಿಂಗನಾಯಕ ರವರು ಮನೆಗೆ ಹಿರಿಯವರು. ನನಗೆ ಸ. ನಂ. 30/321 ರಲ್ಲಿ 2 ಎಕರೆ 30 ಗುಂಟೆ ಜಮೀನು ಇದೆ. ವಾದಿಗಳಿಗೆ ಚನ್ನಕಲ್ಲು ಕಾವಲು ಗ್ರಾಮದಲ್ಲಿ ಸ. ನಂ.30/ಪಿ91 ರಲ್ಲಿ 1 ಎಕರೆ 35 ಗುಂಟೆ ಜಮೀನು ಇದೆ ಎಂದರೆ ಸರಿ. ಮೃತ 2 ನೇ ಪ್ರತಿವಾದಿಗೆ ಚನ್ನಕಲ್ಲು ಕಾವಲು ಗ್ರಾಮದಲ್ಲಿ ಸ. ನಂ. 30/322 ರಲ್ಲಿ 2 ಎಕರೆ 13 ಗುಂಟೆ ಜಮೀನು ಇದೆ ಎಂದರೆ ಸರಿ. ಈಗ ಹೇಳಿದ ಸ. ನಂಬರು ಮತ್ತು ವಿಸ್ತೀರ್ಣದಲ್ಲಿ ಅವರವರು ಅವರ ಕುಟುಂಬದೊಂದಿಗೆ ವ್ಯವಸಾಯ ಮಾಡಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸರಿ. ಸದರಿ ಜಮೀನುಗಳು ಅವರವರಿಗೆ ಕಾಡು ಕಡಿದು ಮಂಜೂರಾದಂತಹ ಜಮೀನುಗಳು ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರು ಬೇರೆ ಬೇರೆ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಸದರಿ ಮನೆಗಳನ್ನು ನನ್ನ ತಂದೆ ಮತ್ತು ಅವರ ಸಹೋದರರು ಬಾಯಿ ಮಾತಿನಲ್ಲಿ ಹಂಚಿಕೊಂಡು ಅವರವರಿಗೆ ಬಂದ ಪಾಲಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ.

2. ವಾದಿಗಳ, ನಮ್ಮ ಮತ್ತು ಮೃತ 2 ನೇ ಪ್ರತಿವಾದಿಯ ಜಮೀನುಗಳು ಅಕ್ಕಪಕ್ಕ ಇದೆ. ಮೃತ 2 ನೇ ಪ್ರತಿವಾದಿಯ ಜಮೀನಿಗೆ ಅವರು ತಂತಿ ಬೇಲಿ ಹಾಕಿಕೊಂಡಿದ್ದಾರೆ, ಆದರೆ ನಮ್ಮ ಮತ್ತು ವಾದಿಗಳ ಜಮೀನಿಗೆ ತಂತಿ ಬೇಲಿ ಹಾಕಿಲ್ಲ. ದಾವಾ ಐಟಂ ನಂ. 1 ರ ಸ್ವತ್ತನ್ನು ನಾವು ಮತ್ತು ಮೃತ 2 ನೇ ಪ್ರತಿವಾದಿ ಯವರು ಉಳುಮೆ ಮಾಡುತ್ತಿದ್ದೆವು. ಚನ್ನಕಲ್ಲು ಕಾವಲು ಗ್ರಾಮದ ಸ. ನಂ. 31/ಪಿ91 ರ 1 ಎಕರೆ 35 ಗುಂಟೆಯನ್ನು ವಾದಿಗಳು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನಾವು ವಾದಿಗಳ ಜಮೀನಿಗೆ

ತೊಂದರೆ ನೀಡಿಲ್ಲ, ಆದರೆ ಅವರೇ ನಮಗೆ ತೊಂದರೆ ನೀಡಿದ್ದಾರೆ. ಇದೇ ಜಮೀನಿನ ಸಲುವಾಗಿ ನಮ್ಮ ಮೇಲೆ ವಾದಿಗಳು ಮತ್ತು ವಾದಿಗಳ ಮೇಲೆ ನಾವು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದರೆ ಸರಿ.

3. ಚನ್ನಕಲ್ಲು ಕಾವಲು ಗ್ರಾಮದ ಸ. ನಂ. 31/ಪಿ91 ರ 1 ಎಕರೆ 35 ಗುಂಟೆಗೆ ವಾದಿಗಳು ತಂತಿ ಬೇಲಿಯನ್ನು ಹಾಕುವ ವಿಚಾರಕ್ಕೆ ಮತ್ತು ಅವರ ಸ್ವಾಧೀನಕ್ಕೆ ನಾವು ತೊಂದರೆ ನೀಡಿದ್ದೇವೆ ಎಂದು ಕ್ರಿಮಿನಲ್ ಪ್ರಕರಣಗಳು ದಾಖಲಾದವು ಎಂದರೆ ಸರಿ. ಚನ್ನಕಲ್ಲು ಕಾವಲು ಗ್ರಾಮದ ಸ. ನಂ. 31/ಪಿ91 ರ 1 ಎಕರೆ 35 ಗುಂಟೆಯ ಜಮೀನಿಗೆ ನಮಗೂ ಮತ್ತು ಮೃತ 2 ನೇ ಪ್ರತಿವಾದಿಯ ಕುಟುಂಬದವರಿಗೆ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇಲ್ಲ.

4. ದಾವಾ ಐಟಂ ನಂ. 2 ಸ್ವತ್ತಿನ ಮೇಲೆ ನಮಗೆ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇಲ್ಲ. ದಿಃ 25.09.2014 ರಂದು ವಾದಿಗಳು ತಮ್ಮ ದಾವಾ ಐಟಂ ನಂ. 1 ರ ಜಮೀನಿನ ದುರಸ್ತು ಮತ್ತು ಸರ್ವೆ ಸ್ಕೆಚ್ ಮಾಡಿಸಿ ತಂತಿ ಬೇಲಿ ನೆಡುತ್ತಿದ್ದರು ಎಂದರೆ ಸರಿ. ಆಗ ಜೋಳ ಬೆಳೆದಿದ್ದರು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಜೋಳ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ತಂತಿ ಕಂಬ ಹಾಕಲು ಬಿಡದೇ ಮತ್ತು ಜೋಳದ ಬೆಳೆಯನ್ನು ನಾಶ ಮಾಡಲು ನಾವು ಪ್ರಯತ್ನಿಸಿದೆವು ಎಂದರೆ ಸರಿಯಲ್ಲ.

5. ನನ್ನ ತಂದೆ ಮತ್ತು ಮೃತ 2 ನೇ ಪ್ರತಿವಾದಿ ವಾದಿಗಳ ವಿರುದ್ಧ ಓ ಎಸ್ 30/2015 ರ ದಾವೆಯನ್ನು ಹೂಡಿದ್ದೆವು ಎಂದರೆ ಸರಿ. ಸದರಿ ದಾವೆಯನ್ನು ಸ. ನಂ. 30/332 ರ 2 ಎಕರೆ 13 ಗುಂಟೆಗೆ ಹೂಡಿದ್ದರು ಎಂದರೆ ಸರಿ. ಆ ಜಮೀನಿನ ಚಕ್ಕುಬಂದಿ ಪೂಃ ಕೃಷ್ಣೇಗೌಡರ ಜಮೀನು, ಪಃ ಸಿದ್ದಲಿಂಗಪ್ಪ ರವರು ಇದ್ದಾರೆ, ಆದರೆ ಬೇರೆಯವರ ಜಮೀನು, ಉಃ ಮಲ್ಲಯ್ಯ ರವರ ಜಮೀನು, ದಃ ನಮ್ಮ ಜಮೀನು. ಸದರಿ ಜಮೀನಿನ ದಕ್ಷಿಣಕ್ಕೆ ಕಟ್ಟೆ ಇಲ್ಲ. ಉತ್ತರಕ್ಕೆ ರಸ್ತೆ ಇದೆ. ಸ. ನಂ. 30/332 ರ 2 ಎಕರೆ 13 ಗುಂಟೆ ಜಮೀನ ಪೂಃ ಕೃಷ್ಣೇಗೌಡರ ಜಮೀನಿದ್ದು ನಂತರ ದಾವಾ ಐಟಂ ನಂ. 1 ರ ಜಮೀನು ಇದೆ.

6. ನಾನು ಮತ್ತು ವಾದಿಗಳು ಈಗ ಅನ್ಯೋನ್ಯವಾಗಿಲ್ಲ. ನನಗೂ ಮತ್ತು ವಾದಿಗಳಿಗೂ 2010 ರಿಂದ ಜಮೀನಿನ ವಿಷಯಕ್ಕೆ ಮಾತುಕತೆ ಇಲ್ಲ. ನಮಗೆ ಮತ್ತು 1 ನೇ ವಾದಿಗೆ ಮಂಜೂರಾದ ಜಮೀನುಗಳಲ್ಲಿ ನಾವು ಸ್ವಾಧೀನ ಇದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒತ್ತುವರಿ ಮಾಡಿಕೊಂಡ ಜಮೀನನ್ನು ನಮಗೆ ಬಿಟ್ಟು ಕೊಡಿ ಎಂದು ಕೇಳುತ್ತಿದ್ದೇವೆ. ನಮಗೆ ಸೇರಿದ ಸ. ನಂ. 30 ಪೋಡು ಗೊತ್ತಿಲ್ಲ, ಜಮೀನನ್ನು 1 ನೇ ವಾದಿ ಒತ್ತುವರಿ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಸರ್ವೆ ಮಾಡಿಸಿ ಕಲ್ಲು ನೆಟ್ಟಿದ್ದೇವೆ. ನಮ್ಮ ಮತ್ತು ಮೃತ 2 ನೇ ಪ್ರತಿವಾದಿಯ ಜಮೀನುಗಳನ್ನು ಸೇರಿಸಿ ವಾದಿ 1 ಎಕರೆ 35 ಗುಂಟೆ ಒತ್ತುವರಿ ಮಾಡಿದ್ದಾರೆ. ವಾದಿಗಳಿಗೆ ಮಂಜೂರಾದ 1 ಎಕರೆ 35 ಗುಂಟೆ ಯನ್ನು ಹೊರತುಪಡಿಸಿ ನಮ್ಮ 1 ಎಕರೆ 35 ಗುಂಟೆ ಜಮೀನನ್ನು ಸಹಾ ಒತ್ತುವರಿ ಮಾಡಿಕೊಂಡಿದ್ದಾರೆ. ಸಾಕ್ಷಿಯು ಮುಂದುವರೆದು , ಮೃತ 2 ನೇ ಪ್ರತಿವಾದಿ ತೆಗೆಸಿದ್ದ ಬಾವಿಯನ್ನೂ ಸಹ ರಾತ್ರೋ ರಾತ್ರಿ ವಾದಿಗಳು ಜೆ ಸಿ ಬಿ ಯಿಂದ ಮುಚ್ಚಿಸಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಜಮೀನನ್ನು ಒತ್ತುವರಿ ಮಾಡಿಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಬಾವಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ.

7. ವಾದಿಗಳ ಮಕ್ಕಳಾದ ನಾಗನಾಯಕ ಮತ್ತು ಕುಮಾರನಾಯಕ ರವರು ತಲಾ 20 ಗುಂಟೆ ಜಮೀನನ್ನು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿಯವರು ತಲಾ 20 ಗುಂಟೆ ಸರಕಾರಿ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ ಎಂದು ನಮಗೂ ಮತ್ತು ವಾದಿಗಳಿಗೂ ದ್ವೇಷ ಎಂದರೆ ಸಾಕ್ಷಿಯು ಸದರಿ ಜಮೀನನ್ನು ಬಿಡಿಸಿ ಕೊಡಿ ಎಂದು ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದು ನುಡಿಯುತ್ತಾರೆ.

8. ಓ ಎಸ್ 30/2015 ಅನ್ನು ಮೃತ 2 ನೇ ಪ್ರತಿವಾದಿ ಹೂಡಿದ ಬಗ್ಗೆ ಗೊತ್ತು. ಸದರಿ ದಾವೆಯನ್ನು ಒತ್ತುವರಿ ಬಿಡಿಸಿ ಕೊಡಿ ಎಂದು ಹೂಡಿದ್ದು. 2010 ರಿಂದಲೂ ವಾದಿಗಳು ಒಂದು ಕಡೆ ಮತ್ತು ನಾವು ಪ್ರತಿವಾದಿಗಳು ಒಂದು ಕಡೆ ಎಂದರೆ ಸಾಕ್ಷಿಯು

ಜಮೀನಿನ ವಿಚಾರವಾಗಿ ಎಂದರೆ ಸರಿ ಎಂದು ನುಡಿಯುತ್ತಾರೆ. ವಾದಿಗಳು ಮತ್ತು ಅವರ ಮಕ್ಕಳು ಚೆನ್ನಾಗಿ ವ್ಯವಸಾಯ ಮಾಡಿ ಆದಾಯ ಗಳಿಸುತ್ತಾರೆ ಎಂದರೆ ಸರಿ. ಅವರು ಚೆನ್ನಾಗಿ ಆದಾಯ ಗಳಿಸುತ್ತಾರೆ ಎಂದು ನಮಗೆ ದ್ವೇಷ ಇದೆ ಎಂದರೆ ಸರಿಯಲ್ಲ. ವಾದಿಗಳು ಸರಕಾರದಿಂದ ಮಂಜೂರಾದ ಜಮೀನಿನಲ್ಲಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾವು ಯಾವುದೇ ಸರ್ವೆ ಮಾಡಿಸಿಲ್ಲ ಮತ್ತು ಯಾವುದೇ ಒತ್ತುವರಿ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಯಾವುದೇ ದಾಖಲೆಗಳ ಆಧಾರ ಇಲ್ಲದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ವಯಸ್ಸಾದ್ದರಿಂದ ನಾವುಗಳು ಎಲ್ಲಾ ಸೇರಿ ದಬ್ಬಾಳಿಕೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತು ನ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ವಾದಿಗಳಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

9. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ಅಂಶಗಳು ಗೊತ್ತಿಲ್ಲ. ನಾನು ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**